ಉದ್ದೇಶಿಸಲಾಗಿದೆ. ೧೯೫೫-೬೬ರ ವೇಳೆಗೆ ಯೋಜನೆಯು ಪೂರ್ಣ ೪.೨೫ ಲಕ್ಷ ಹೆಕ್ಟೇರು (೧೦,೫೦,೦೦೦ ಎಕರೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ೧೯೮೬-೮೭ನೇ ಸಾಲಿಗಾಗಿ ಈ ಯೋಜನೆಗೆ ೬೩.೮೨ ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ೭ನೇ ಪಂಚ ವಾರ್ಷಿಕ ಯೋಜನೆಯಲ್ಲಿ (೧೯೮೫-೮೬ ರಿಂದ ೧೯೮೯-೯೦ ರವರೆಗೆ) ಈ ಯೋಜನೆಗೆ ೪೦೦ ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ನಂಜನಗೂಡು ಗುಂಡ್ಲ ಹಳ್ಳದ ಸೇತುವೆ ಬಗ್ಗೆ

೧೩೧೦ (೩೮೬) ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ನಂಜನಗೂಡು ಪುರಸಭೆಯ ಸರಹದ್ದಿನಲ್ಲಿ ಬರುವ ಗುಂಡ್ಲಹಳ್ಳದ ಸೇತುವೆ ಶಿಥಿಲವಾಗಿ ವಾಹನ ಸಂಚಾರಗಳಿಗೆ ಅನರ್ಹವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಸೇತುವೆ ಬದಲಾಗಿ ಹೊಸ ಸೇತುವೆ ನಿರ್ಮಾಣಕ್ಕೆ ಸರಕಾರದವರು ಮಂಜೂರಾತಿ ನೀಡಿದ್ದಾರೆಯೇ ?

ಇ) ಇದರ ಅಂದಾಜು ವೆಚ್ಚವೆಷ್ಟು ?

ಈ) ಈ ಕೆಲಸ ಯಾವಾಗ ಪೂರ್ಣಗೊಳ್ಳುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈ ಸೇತುವೆ ವಾಹನ ಸಂಚಾರಕ್ಕೆ ಯೋಗ್ಯವಾಗಿದೆ.

ಆ)
ಇ)
ಈ) } 'ಅ' ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕಬಿನಿ ನೀರಾವರಿ ಯೋಜನೆ ಬಗ್ಗೆ

೧೩೨೨ (೩೮೭) ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕಬಿನಿ ನೀರಾವರಿ ಹೆಚ್ಚಿನ ಯೋಜನೆಗೆ ಸರ್ಕಾರದವರು ಮಂಜೂರಾತಿ ನೀಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ?

ಇ) ಈ ಯೋಜನೆಯಲ್ಲಿ ನುಗು ಜಲಾಶಯಕ್ಕೆ ಕಬಿನಿ ನದಿಯಿಂದ ನೀರೊದಗಿಸುವುದನ್ನು ಸೇರಿಸಲಾಗಿದೆಯೆ ?

ಈ) ಈ ಕೆಲಸ ಎಷ್ಟು ವರ್ಷಗಳಲ್ಲಿ ಪೂರ್ಣಗೊಳ್ಳುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಪ್ರಸ್ತುತ ನೀರಾವರಿ ಸೇರಿರುವ ಕಬಿನಿ ಯೋಜನೆಗೆ ಮಂಜೂರಾತಿ ನೀಡಿದೆ.

ಆ) ಈ ಕಬಿನಿ ಯೋಜನೆಯ ಅಂದಾಜು ವೆಚ್ಚ ೫೯ ಕೋಟಿ ರೂ.ಗಳು.

ಇ) ಸೇರಿಸಲಾಗಿದೆ.

ಈ) ಎಂಭತ್ತನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮುಗಿಸಲು ಯೋಚಿಸಲಾಗಿದೆ.